# All India Radio: Bangalore
# National Bulletins In Kannada
# 01.07.2025 / 1.10pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**01.07.2025 / 1.10pm**

<><*<><>*><>

<u>ಮುಖ್ಯಾಂಶಗಳು</u>

- ಉತ್ತರ ಪ್ರದೇಶದಲ್ಲಿಂದು ಮಹಾಯೋಗಿ ಗುರು ಗೋರಖ್‌ನಾಥ್ ಆಯುಷ್ ವಿಶ್ವವಿದ್ಯಾಲಯ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು
- ಡಿಜಿಟಲ್ ಇಂಡಿಯಾ ಉಪಕ್ರಮಕ್ಕೆ ೧೦ ವರ್ಷ; ಸಬಲೀಕರಣದ ನವಯುಗ ಎಂದು ಬಣ್ಣಿಸಿದ ಪ್ರಧಾನಿ
- ತೆಲಂಗಾಣದ ಕೈಗಾರಿಕಾ ಘಟಕದಲ್ಲಿ ಭಾರೀ ಸ್ಫೋಟ ; ಸಾವನ್ನಪ್ಪಿದವರ ಸಂಖ್ಯೆ ೩೫ಕ್ಕೆ ಏರಿಕೆ
- ಅಂತಾರಾಷ್ಟ್ರೀಯ ಮಹಿಳಾ ಟಿ-೨೦ ಕ್ರಿಕೆಟ್ ಸರಣಿ ; ಎರಡನೇ ಪಂದ್ಯದಲ್ಲಿಂದು ಭಾರತ-ಇಂಗ್ಲೆಂಡ್ ಮುಖಾಮುಖಿ

*************

ಉತ್ತರ ಪ್ರದೇಶ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಗೋರಖ್‌ಪುರದಲ್ಲಿಂದು ಮೊದಲ ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಿದರು. ಈ ವೇಳೆ ಉತ್ತರಪ್ರದೇಶ ರಾಜ್ಯಪಾಲರಾದ ಆನಂದಿಬೇನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉಪಸ್ಥಿತರಿದ್ದರು.ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಸೇರಿದಂತೆ ಸಾಂಪ್ರದಾಯಿಕ ಔಷಧಿ ಪದ್ಧತಿಗಳಲ್ಲಿ ಚಿಕಿತ್ಸೆ ಮತ್ತು ಶಿಕ್ಷಣ ನೀಡುವ ಪ್ರಮುಖ ಕೇಂದ್ರವಾಗಲಿದೆ.೨೦೨೧ರಲ್ಲಿ ಅಗಸ್ಟ್ ೨೮ ರಂದು ಅಂದಿನ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಈ ವಿಶ್ವವಿದ್ಯಾಲಯದ ಶಂಕುಸ್ಥಾಪನೆ ನೆರವೇರಿಸಿದ್ದರು. ೫೨ ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಈ ವಿಶ್ವವಿದ್ಯಾಲಯವನ್ನು ೨೬೭ ಕೋಟಿ ರೂಪಾಯಿಗಿಂತಲೂ ಹೆಚ್ಚಿನ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಬಳಿಕ ರಾಷ್ಟ್ರಪತಿ ಮುರ್ಮು ಅವರು ಗೊರಖನಾಥ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ.ಬಳಿಕ ಅವರು ಸೋನ್‌ಬರ್ಸಾದಲ್ಲಿರುವ ಮಹಾಯೋಗಿ ಗೊರಖನಾಥ್ ವಿಶ್ವವಿದ್ಯಾಲಯದ ಆರೋಗ್ಯಧಾಮ್ ಆವರಣದಲ್ಲಿ ನೂತನ ಶೈಕ್ಷಣಿಕ ಸಂಕೀರ್ಣ, ಸಭಾಂಗಣ, ಪಂಚಕರ್ಮ ಕೇಂದ್ರ ಉದ್ಘಾಟಿಸುವ ಜೊತೆಗೆ ವಿದ್ಯಾರ್ಥಿನಿಯರ ವಸತಿ ನಿಲಯದ ಶಿಲಾನ್ಯಾಸ ನೆರವೇರಿಸಲಿದ್ದಾರೆ. ರಾಷ್ಟ್ರಪತಿ ಅವರ ಪ್ರವಾಸದ ಹಿನ್ನೆಲೆಯಲ್ಲಿ ಬರೆಲೀ ಮತ್ತು ಗೊರಖ್‌ಪುರದಲ್ಲಿ ಕಠಿಣ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

*************

ಉತ್ತಮ ಆಡಳಿತ ಮತ್ತು ಜನರ ದಿನನಿತ್ಯದ ಜೀವನವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುವ ಡಿಜಿಟಲ್ ಇಂಡಿಯಾ ಉಪಕ್ರಮಕ್ಕೆ ಇಂದಿಗೆ ೧೦ ವರ್ಷ ಪೂರೈಸಿದೆ. ಈ

ಹಿನ್ನೆಲೆ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ೧೪೦ ಕೋಟಿ ಭಾರತೀಯರ ಸಾಮೂಹಿಕ ಸಂಕಲ್ಪದಿಂದ ಭಾರತ, ಡಿಜಿಟಲ್ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದೆ ಎಂದು ತಿಳಿಸಿದ್ದಾರೆ.ಭಾರತವನ್ನು ಡಿಜಿಟಲ್ ಸಬಲೀಕರಣ ಮತ್ತು ತಾಂತ್ರಿಕವಾಗಿ ಮುಂದುವರಿದ ಸಮಾಜವಾಗಿ ಪರಿವರ್ತಿಸುವ ಪ್ರಯತ್ನವಾಗಿ ಈ ಕಾರ್ಯಕ್ರಮ ಪ್ರಾರಂಭವಾಯಿತು. ಒಂದು ದಶಕದ ನಂತರ, ದೇಶ ಸಬಲೀಕರಣದ ಹೊಸ ಯುಗಕ್ಕೆ ನಾಂದಿ ಹಾಡಿದೆ ಎಂದರು. ಈ ಡಿಜಿಟಲ್ ಪರಿವರ್ತನೆಯಿಂದ ಆರೋಗ್ಯ ಮತ್ತು ಶಿಕ್ಷಣದಂತಹ ಕ್ಷೇತ್ರಗಳು ಗಮನಾರ್ಹ ಪ್ರಯೋಜನಗಳನ್ನು ಕಂಡಿವೆ. ಕಳೆದ ಹತ್ತು ವರ್ಷಗಳಲ್ಲಿ, ಡಿಜಿಟಲ್ ಇಂಡಿಯಾ ದೇಶದ ಡಿಜಿಟಲ್ ಕ್ಷೇತ್ರವನ್ನು ಮರುರೂಪಿಸಿದೆ. ದೂರದ ಹಳ್ಳಿಗಳಿಗೆ ಅಂತರ್ಜಾಲ ಸಂಪರ್ಕವನ್ನು ಒದಗಿಸಲಾಗಿದ್ದು, ಆಡಳಿತವನ್ನು ಹೆಚ್ಚು ಪಾರದರ್ಶಕ ಗೊಳಿಸಲಾಗಿದೆ. ನಾವೀನ್ಯತೆ ಹಾಗೂ ಆರ್ಥಿಕ ಬೆಳವಣಿಗೆಗೆ ಹೊಸ ಅವಕಾಶಗಳನ್ನು ತೆರೆದಿದೆ. ಕೃತಕ ಬುದ್ಧಿಮತ್ತೆ ಮತ್ತು ಸೆಮಿಕಂಡಕ್ಟರ್‌ಗಳಂತಹ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ದೇಶವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಇದರ ಪರಿಣಾಮವಾಗಿ, ಭಾರತ ಎಲ್ಲರನ್ನೂ ಒಳಗೊಳ್ಳುವ, ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಡಿಜಿಟಲ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸಿದೆ.

*************

ಡಿಜಿಟಲ್ ಇಂಡಿಯಾ ಕೇವಲ ಸರ್ಕಾರದ ಯೋಜನೆಯಲ್ಲದೆ ಈಗ ಜನಾಂದೋಲನವಾಗಿ ರೂಪಾಂತರಗೊಂಡಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.ಸೋಷಿಯಲ್ ಮಾಧ್ಯಮದಲ್ಲಿ ಅವರು, ಆತ್ಮನಿರ್ಭರ್ ಭಾರತ್ ನಿರ್ಮಾಣಕ್ಕೆ ಹಾಗೂ ಭಾರತವನ್ನು ಜಾಗತಿಕ ವಿಶ್ವಾಸಾರ್ಹ ನಾವೀನ್ಯತೆಯ ಪಾಲುದಾರನಾಗಿಸಲು ಡಿಜಿಟಲ್ ಇಂಡಿಯಾ ಕೇಂದ್ರಬಿಂದುವಾಗಿದೆ ಎಂದು ತಿಳಿಸಿದ್ದಾರೆ.ವಾಣಿಜ್ಯ ಸಚಿವ ಪಿಯೂಷ್ ಗೋಯಲ್ " ಯುಪಿಐ, ಡಿಬಿಟಿ, ಜೆಮ್, ಒಎನ್‌ಡಿಸಿ, ಸ್ವಾಮಿತ್ವ ಸೇರಿದಂತೆ ಹಲವು ಉಪಕ್ರಮಗಳಿಂದ ಭಾರತ ಡಿಜಿಟಲ್ ಆಡಳಿತದಿಂದ ಜಾಗತಿಕ ಡಿಜಿಟಲ್ ನಾಯಕತ್ವದತ್ತ ಸಾಗುತ್ತಿದೆ" ಎಂದು ಹೇಳಿದ್ದಾರೆ.ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, "ಡಿಜಿಟಲ್ ಇಂಡಿಯಾ ಯೋಜನೆಯಡಿ  ಇ-ನಾಮ್ ಮೂಲಕ ಕೃಷಿಯಲ್ಲಿ ಕ್ರಾಂತಿ ಸಂಭವಿಸಿದೆ. ಈಗ ರೈತರು ನೇರವಾಗಿ ಖರೀದಿದಾರರೊಂದಿಗೆ ಸಂಪರ್ಕ ಸಾಧಿಸಬಹುದು. ಸುಮಾರು ೪ ಲಕ್ಷ ಕೋಟಿ ರೂಪಾಯಿ ಮೌಲ್ಯದ ವ್ಯಾಪಾರ ವಹಿವಾಟಿನೊಂದಿಗೆ ೧.೭ ಕೋಟಿ ರೈತರು, ೧ ಸಾವಿರದ ೪೦೦ಕ್ಕೂ ಹೆಚ್ಚು ಮಾರುಕಟ್ಟೆಗಳೊಂದಿಗೆ ಸಂಪರ್ಕ ಸಾಧಿಸಿದ್ದಾರೆ " ಎಂದು ಹೇಳಿದ್ದಾರೆ.

*************

ರಾಷ್ಟ್ರೀಯ ವೈದ್ಯರ ದಿನವಾದ ಇಂದು ಪ್ರಧಾನಿ ನರೇಂದ್ರ ಮೋದಿ ಸಮಸ್ತ ವೈದ್ಯಕೀಯ ಸಮುದಾಯದ ಸದಸ್ಯರಿಗೆ ಶುಭಾಶಯಗಳನ್ನು ಕೋರಿದ್ದಾರೆ. ವೈದ್ಯರು ತಮ್ಮ ಕೌಶಲ್ಯ ಮತ್ತು ಶ್ರದ್ಧೆಯಿಂದ ತಮ್ಮದೇ ಛಾಪು ಮೂಡಿಸಿದ್ದಾರೆ. ವೈದ್ಯರು ಆರೋಗ್ಯದ ರಕ್ಷಕರು ಮತ್ತು ಮಾನವೀಯತೆಯ ಸ್ತಂಭಗಳಾಗಿದ್ದು, ಭಾರತದ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸುವಲ್ಲಿ ಅವರ ಕೊಡುಗೆ ಅಪಾರ  ಎಂದು ಪ್ರಧಾನಿ ಹೇಳಿದ್ದಾರೆ.ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದ ಪ್ರಸಿದ್ಧ ವೈದ್ಯ ಬಿಧನ್ ಚಂದ್ರ ರಾಯ್ ಅವರ ಸ್ಮರಣಾರ್ಥ ಜುಲೈ ೧ ಅನ್ನು ರಾಷ್ಟ್ರೀಯ ವೈದ್ಯರ ದಿನವೆಂದು ಆಚರಿಸಲಾಗುತ್ತದೆ

ಮತ್ತು ಅವರ ಜನ್ಮ ಮತ್ತು ಮರಣದ ಸ್ಮರಣೆ ದಿನವೂ ಇದೇ ದಿನವಾಗಿದೆ.ಡಾ. ರಾಯ್ ಅವರು ವೈದ್ಯಕೀಯ ಮತ್ತು ಸಾರ್ವಜನಿಕ ಸೇವೆಗೆ ನೀಡಿದ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ ೧೯೬೧ ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಗೌರವವಾದ ಭಾರತ ರತ್ನ ನೀಡಲಾಗಿದೆ. ಜುಲೈ ೧ ರಂದು ದೇಶ ವೈದ್ಯರ ಜೊತೆಗೆ ಲೆಕ್ಕಪರಿಶೋಧಕರ ವೃತ್ತಿಗಳನ್ನು ಗೌರವಿಸುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ. "ಇವೆರಡೂ ಸಮಾಜದ ಸ್ತಂಭಗಳಾಗಿದ್ದು, ವೈದ್ಯರು ಆರೋಗ್ಯದ ರಕ್ಷಕರು ಮತ್ತು ಚಾರ್ಟರ್ಡ್ ಅಕೌಂಟೆಂಟ್‌ಗಳು ಆರ್ಥಿಕ ಜೀವನದ ಮಾರ್ಗದರ್ಶಕರು" ಎಂದು ಪ್ರಧಾನಿ ತಿಳಿಸಿದ್ದಾರೆ.

*************

ತೆಲಂಗಾಣದ ಸಂಗರೆಡ್ಡಿ ಜಿಲ್ಲೆಯ ಕೈಗಾರಿಕಾ ಘಟಕದಲ್ಲಿ ನಿನ್ನೆ ಸಂಭವಿಸಿದ ಭಾರಿ ಸ್ಫೋಟದ ಪರಿಣಾಮವಾಗಿ ಸಾವನ್ನಪ್ಪಿದವರ ಸಂಖ್ಯೆ ೩೫ ಕ್ಕೆ ಏರಿದೆ. ಈವರೆಗೆ ಪೊಲೀಸರಿಗೆ ಕೇವಲ ೧೧ ಮೃತದೇಹಗಳ ಗುರುತು ಪತ್ತೆಹಚ್ಚಲು ಸಾಧ್ಯವಾಗಿದೆ.ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಅಧಿಕಾರಿಗಳು ಅವಶೇಷಗಳಡಿ ಇನ್ನೂ ಸುಮಾರು ೧೬ ಕಾರ್ಮಿಕರು ಸಿಲುಕಿ ಹಾಕಿಕೊಂಡಿರುವ ಶಂಕೆ ವ್ಯಕ್ತಪಡಿಸಿದ್ದಾರೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿಯ ಸಹಾಯದೊಂದಿಗೆ ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಸುಟ್ಟ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿ ದಾಖಲಾಗಿರುವ ೩೫ ಕಾರ್ಮಿಕರ ಪೈಕಿ ೧೨ ಜನರ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ. ಹೆಚ್ಚಿನ ಸಂತ್ರಸ್ಥರು ಒಡಿಶಾ, ಉತ್ತರ ಪ್ರದೇಶ ಹಾಗೂ ಬಿಹಾರದ ವಲಸಿಗ ಕಾರ್ಮಿಕರಾಗಿದ್ದಾರೆ. ಸಚಿವರು ಈ ಘಟನೆ ಕುರಿತು ಸಮಗ್ರ ತನಿಖೆಗೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಆದೇಶಿಸಿದ್ದಾರೆ.

*************

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಭಾರತ ಮತ್ತು ಅಮೆರಿಕಾ ನಡುವಿನ ೨೫ ವರ್ಷಗಳ ಸಂಬಂಧವನ್ನು ಶ್ಲಾಘಿಸಿದ್ದಾರೆ. ಕಳೆದ ಐದು ಅಮೆರಿಕ ಅಧ್ಯಕ್ಷರ ಅವಧಿಯಲ್ಲಿ ಭಾರತ-ಅಮೆರಿಕಾ ಸಂಬಂಧವು ಬಲಿಷ್ಠವಾಗಿದ್ದು, ವಿವಿಧ ಪ್ರಮುಖ ಕ್ಷೇತ್ರಗಳಲ್ಲಿ ಸಕಾರಾತ್ಮಕ ಬೆಳವಣಿಗೆ ಕಂಡಿದೆ ಎಂದು ಅವರು ಹೇಳಿದರು.ವಾಷಿಂಗ್ಟನ್ ಡಿಸಿಯಲ್ಲಿ ನಡೆಯುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಅಮೆರಿಕ ಪ್ರವಾಸದಲ್ಲಿರುವ ಜೈಶಂಕರ್, ಆರ್ಥಿಕತೆ, ತಂತ್ರಜ್ಞಾನ, ಶಿಕ್ಷಣ, ಭದ್ರತೆ ಹಾಗೂ ಇಂಧನ ಕ್ಷೇತ್ರಗಳು ಈ ಸಂಬಂಧದ ಪ್ರಮುಖ ಚಾಲಕ ಕ್ಷೇತ್ರಗಳಾಗಿವೆ ಎಂದರು

ಧ್ವನಿ : ಜೈಶಂಕರ್

*************

ಹಲವು ಪರೋಕ್ಷ ತೆರಿಗೆಗಳ ಬದಲಿಗೆ ಸರಳ, ಹಾಗೂ ಏಕೀಕೃತ ತೆರಿಗೆ ವ್ಯವಸ್ಥೆಯಾಗಿ ಜಾರಿಗೊಂಡ ಸರಕು ಮತ್ತು ಸೇವಾ ತೆರಿಗೆ ಜಿಎಸ್‌ಟಿ ಎಂಟು ವರ್ಷ ಪೂರೈಸಿದೆ. ೨೦೧೭ರಲ್ಲಿ ಜಾರಿಗೆ ಬಂದ ಜಿಎಸ್‌ಟಿ, ಪಾರಂಪರಿಕ ಪರೋಕ್ಷ ತೆರಿಗೆಗಳನ್ನು ಏಕೀಕೃತ ವ್ಯವಸ್ಥೆಯಾಗಿ ಬದಲಾಯಿಸಿ ವ್ಯಾಪಾರಿಗಳಿಗೆ, ಉದ್ಯಮಗಳಿಗೆ, ತೆರಿಗೆ ಪಾವತಿ ವ್ಯವಸ್ಥೆ ಸರಳಗೊಳಿಸಿದ ಜೊತೆಗೆ ವ್ಯವಹಾರ ವೆಚ್ಚ ಕಡಿಮೆಯಾಗಿದೆ.

************

ಬ್ರಿಸ್ಟಲ್‌ನ ಕೌಂಟಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐದು ಪಂದ್ಯಗಳ ಮಹಿಳಾ ಅಂತರರಾಷ್ಟ್ರೀಯ ಟಿ೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ಹಾಗೂ ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೧ ಗಂಟೆಗೆ ಆರಂಭವಾಗಲಿದೆ.ಈ ಹಿಂದೆ ನಾಟಿಂಗ್‌ಹ್ಯಾಮ್‌ನ ಟ್ರೆಂಟ್ ಬ್ರಿಡ್ಜ್ ಮೈದಾನದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ೯೭ ರನ್‌ಗಳ ಭರ್ಜರಿ ಗೆಲುವು ಸಾಧಿಸಿ ಸರಣಿಯಲ್ಲಿ ೧-೦ ಮುನ್ನಡೆ ಪಡೆದುಕೊಂಡಿದೆ.

******End*******